172

'ಪಂಚತಂತ್ರ'ದ ಕತೆಗಳು

(ಅನುವಾದ)

ಅನುವಾದಕರು:

ಶ್ರೀ| ಕೆ. ವೆಂಕಟರಾಯಾಚಾರ್ಯ,

ವಿದ್ವಾನ್, ಸುರತ್ಕಲ್ಲಿ (ದ.ಕ.)

1958.

ಒಂದಾಣೆ ಮಾಲೆ

ಮೊದಲ ಮಾತು

ನೀತಿಪರವಾದ ವಿಷಯಗಳಿಗೆ ಆಕರಗಳಾದ 'ಪಂಚತಂತ್ರ'ದ ಕತೆಗಳು ಲೋಕದಲ್ಲಿ ಎಲ್ಲಾ ದೇಶಗಳಲ್ಲಿ ರೂಪಾಂತರವಾಗಿ ಪ್ರಚಾರವಾಗಿವೆ. ವಿಷ್ಣು ಶರ್ಮ, ಹಾಗೂ ವಸುಭಾಗ ಭಟ್ಟ, ಮತ್ತು ಪೂರ್ಣಭದ್ರರೆಂಬ ಮೂವರು ಕವಿಗಳು ಸಂಕಲಿಸಿದ 'ಪಂಚತಂತ್ರ'ಗಳ ಕತೆಗಳಿವೆ. ಇವುಗಳಲ್ಲಿ ಮೊದಲ ಎರಡರ ಹೆಸರು ಆರೆಂಟು ರೀತಿಗಳಲ್ಲಿ ಪ್ರಚುರವಿದೆಯೆಂದು ಬಲ್ಲವರು ಬರೆಯುತ್ತಾರೆ (ಅಭಿವಂದನೆ—ಡಾ| ಎ. ವೆಂಕಟಸುಬ್ಬಯ್ಯನವರ ಲೇಖನ.)

ಕನ್ನಡದಲ್ಲಿ ವಸುಭಾಗನ ಹೆಸರು ಹೇಳುವ ಗ್ರಂಥವು ದುರ್ಗಸಿಂಹನಿಂದ ರಚಿತವಾದುದು. ಅಂತೆ, ವಿಷ್ಣುಶರ್ಮನ ಸಂಸ್ಕೃತಗ್ರಂಥದ ಅನುವಾದವು ಹಲವಾರು ಪುಟಗಳಲ್ಲಿ ಸಾಧ್ಯವಿದೆ. ಇದೀಗ ಅದರ ಸಾರಸಂಗ್ರಹ-ಅನುವಾದವನ್ನು ವಾಚಕರ ಮುಂದಿಡುತ್ತೇವೆ. ದುರ್ಗಸಿಂಹನ ಕನ್ನಡ ಗ್ರಂಥಕ್ಕೂ ವಿಷ್ಣು ಶರ್ಮನ ಸಂಸ್ಕೃತ ಗ್ರಂಥಕ್ಕೂ ಹಲವಾರು ತೆರದಲ್ಲಿ ಬೇರೆತನವಿದೆ. ಕನ್ನಡ ವಾಚಕರಿಗೆ ಅನುಕೂಲವಾಗುವಂತೆ, ಮೂಲ ಗ್ರಂಥದ ಅಭ್ಯಾಸಕ್ಕೆ ಅಭಿರುಚಿಯುಂಟಾಗುವಂತೆ ಸಂಗ್ರಹರೂಪವಾಗಿ ಇಲ್ಲಿ ಬರೆದಿದೆ.

ಸಹೃದಯ ವಾಚಕರ ಪ್ರೋತ್ಸಾಹವಿದ್ದರೆ ಇದೇ ತೆರದಲ್ಲಿ ಮುಂದುವರಿಸಬೇಕೆಂದು ಬಯಕೆಯಿದೆ. ತಥಾಸ್ತು!

ಕನ್ನಡಿಗರಲ್ಲೊಬ್ಬ,

ಕೆ. ವೆಂಕಟರಾಯಾಚಾರ್ಯ.

ಸುರತ್ಕಲ್ಲು,
ತಾ. 18-1-1958.

'ಪಂಚತಂತ್ರ'ದ ಕತೆಗಳು

ಪೂರ್ವಕತೆ

ತೆಂಕನಾಡಿನಲ್ಲಿ 'ಮಹಿಲಾರೋಪ್ಯ'ವೆಂಬ ನಗರವಿದೆ. ಅಲ್ಲಿ ಅಮರಶಕ್ತಿಯೆಂಬ ರಾಜನಿದ್ದನು. ಅವನು ಬೇಡುವವರಿಗೆ 'ಕಲ್ಪದ್ರುಮ'ದಂತೆ ಇದ್ದನು. ಶ್ರೇಷ್ಠರಾಜರ ಕಿರೀಟಮಣಿಗಳ ಕಾಂತಿಮಂಜರಿಗಳಿಂದ ಬೆಳಗಿದ ಪಾದಗಳಿಂದ ಕೂಡಿದ್ದನು.

ಅವನ ಮೂರು ಮಕ್ಕಳು ವಸುಶಕ್ತಿ, ಉಗ್ರಶಕ್ತಿ, ಅನೇಕಶಕ್ತಿ ಎಂಬವರು ತೀರಾ ಕೆಟ್ಟ ಬುದ್ಧಿಯುವರಾಗಿದ್ದರು. ಅವರು ಶಾಸ್ತ್ರವಿಮುಖರೆಂದು ತಿಳಿದ ರಾಜನು ತನ್ನ ಮಂತ್ರಿಯೊಡನೆ ಯೋಚಿಸಿದನು—

"ಎಲೈ ಮಂತ್ರಿ! ನನ್ನ ಮಕ್ಕಳು ಶಾಸ್ತ್ರವಿಮುಖರು, ವಿವೇಕಶೂನ್ಯರು ಎಂದು ನಿನಗೆ ತಿಳಿದೇ ಇದೆ. ಇವರನ್ನು ಕಾಣುವ ನನಗೆ ಈ ದೊಡ್ಡ ರಾಜ್ಯವೂ ಸುಖಾವಹವಲ್ಲ. ಅಜಾತ, ಮೃತ, ಮೂರ್ಖರಲ್ಲಿ ಮೊದಲ ಇಬ್ಬರು ಮೇಲು. ಅವರು ಕೊಂಚ ಮರುಕಗೊಡುವರು. ಜಡನಾದರೋ ಬದುಕಿರುವ ತನಕ ತಾಪಕೊಡುವನು.

ಗರ್ಭಪಾತ, ಹುಟ್ಟಿದೊಡನೆ ಸಾಯುವುದು, ಹೆಮ್ಮಕ್ಕಳೇ ಹುಟ್ಟುವುದು, ಮಕ್ಕಳೇ ಹುಟ್ಟದಿರುವುದು, ಪೊಳ್ಳು ಗಬ್ಬವಾಗುವುದು ಮೊದಲಾದವು ಮೇಲಲ್ಲದೆ ರೂಪ ದ್ರವಿಣ ಗುಣಯುಕ್ತನಾದರೂ ಬುದ್ಧಿಯಿಲ್ಲದ ಮಗನಲ್ಲ.

ಅದು ಕಾರಣ, ಇವರ ಬುದ್ಧಿ ಪ್ರಕಾಶವಾಗುವಂತೆ, ಒಂದು ಉಪಾಯವನ್ನು ಮಾಡು. ಇಲ್ಲಿ ಐನೂರು ಮಂದಿ ಪಂಡಿತರಿದ್ದಾರೆ; ನನ್ನ ಬಯಕೆಯು ನೆರವೇರುವಂತೆ ಮಾಡಿಸಬೇಕು—ಎಂದು.

ಆಗ ಒಬ್ಬ ಪಂಡಿತನು ಹೇಳಿದನು—ದೇವ! ಮೊದಲಾಗಿ ಹನ್ನೆರಡು ವರುಷಗಳಲ್ಲಿ ವ್ಯಾಕರಣವು ತಿಳಿಯಬೇಕು. ಆ ಬಳಿಕ ಧರ್ಮ, ಅರ್ಥ, ಕಾಮಗಳು ಅಷ್ಟೇ ಕಲಿಯತಕ್ಕವು—ಎಂದು.

ಇನ್ನೊಬ್ಬ ಸುಮತಿಯೆಂಬವನು—ಸ್ವಾಮಿ! ಈ ನಮ್ಮ ಬಾಳು ಅಶಾಶ್ವತ. ಹಲವು ಕಾಲದಲ್ಲಿ ಕಲಿಯತಕ್ಕ ಶಾಸ್ತ್ರಗಳ ಸಾರವನ್ನು ಕಲಿಯು

ವಂತೆ ಮಾಡು. 'ಹಂಸಗಳು ನೀರ ನಡುವಿನ ಹಾಲು ಕೊಳ್ಳುವಂತೆ.' ಇಲ್ಲಿ ವಿಷ್ಣುಶರ್ಮನೆಂಬ ಬ್ರಾಹ್ಮಣನು ಸಕಲಶಾಸ್ತ್ರಪಾರಂಗತನಾಗಿ, ಶಿಷ್ಯ ಕೋಟಿಯಲ್ಲಿ ಹೆಸರುಪಡೆದವನು ಇದ್ದಾನೆ. ಅವನು ನಿನ್ನ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡುವನು—ಎಂದನು.

ಅರಸನು ವಿಷ್ಣುಶರ್ಮನನ್ನು ಕರೆಯಿಸಿ ಹೇಳಿದನು—ಭೋ ಸ್ವಾಮಿನ್! ನನ್ನಲ್ಲಿ ಅನುಗ್ರಹಿಸಿ ಈ ನನ್ನ ಮಕ್ಕಳನ್ನು 'ಅರ್ಥಶಾಸ್ತ್ರ'ದಲ್ಲಿ ಬಲು ಬೇಗದಲ್ಲಿ ಎಣೆಯಿಲ್ಲದವರನ್ನಾಗಿ ಮಾಡು. ಅದಕ್ಕಾಗಿ ನೂರು ಶಾಸನ (ದತ್ತಿ)ಗಳನ್ನು ಕೊಡುವೆನೆಂದು.

ವಿಷ್ಣುಶರ್ಮನು ಉತ್ತರಿಸಿದನು—ದೇವಾ! ವಿದ್ಯೆಯ ಮಾರಾಟವನ್ನು ನೂರು ಶಾಸನಗಳಿಂದಲೂ ಮಾಡಲಾರೆನು. ಆದರೆ ನಿನ್ನೀ ಕಂದರನ್ನು ಆರು ತಿಂಗಳೊಳಗೆ 'ನೀತಿಶಾಸ್ತ್ರ'ದ ತಿಳಿವು ಉಳ್ಳವರನ್ನಾಗಿ ಮಾಡುವೆ. ಇಲ್ಲದಿದ್ದರೆ ನನ್ನ ಹೆಸರನ್ನೇ ಬಿಡುವೆನೆಂದು.

ರಾಜನು ಸಂಭಾವ್ಯವಾದ ಆ ಮಾತುಗಳನ್ನು ಕೇಳಿ ತನ್ನ ಮಕ್ಕಳನ್ನು ವಿಷ್ಣುಶರ್ಮನಿಗೆ ಒಪ್ಪಿಸಿದನು. ಆ ವಿಷ್ಣುಶರ್ಮನು ಮಿತ್ರಭೇದ, ಮಿತ್ರ ಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಕಗಳೆಂಬ ಅಯ್ದು ತಂತ್ರಗಳನ್ನು ರಚಿಸಿ; ಅವರಿಗೆ ಕಲಿಸಿದನು. ಅವರು ಅವುಗಳನ್ನು ಕಲಿತು ಈ ಮೇಲೆಂದಂತೆ ಆರು ತಿಂಗಳಲ್ಲಿ ಗಟ್ಟಿಗರಾದರು.

ಆ ಮೊದಲ್ಗೊಂಡು ಬಾಲಕರ ತಿಳಿವಿಗಾಗಿ 'ಪಂಚತಂತ್ರಕ'ವೆಂಬ ಈ 'ನೀತಿಶಾಸ್ತ್ರ'ವು ಪ್ರಚುರಗೊಂಡಿತು.

ಮೊದಲ ತಂತ್ರ—ಮಿತ್ರಭೇದ

'ವರ್ಧಮಾನೋ ಮಹಾನ್ ಸ್ನೇಹಃ ಸಿಂಹಗೋವೃಷಯೋರ್ವನೇ ।
ಪಿಶುನೇನಾ ತಿಲುಬ್ಧೇನ ಜಂಬುಕೇನ ವಿನಾಶಿತಃ ॥'

(ತಾತ್ಪರ್ಯ: ಸಿಂಗ ಬಸವಗಳ ಬಳೆದ ಸ್ನೇಹವು ।
ಭಂಗವಾದುದು ಜಂಬುಕನಿಂದಲಿ ॥)

'ಮಹಿಲಾರೋಪ್ಯ'ವು ತೆಂಕನಾಡುಗಳಲ್ಲೊಂದು. ಅಲ್ಲಿ ಧರ್ಮದಿಂದ ಹಣಗಳಿಸಿದ ವರ್ಧಮಾನನೆಂಬ ವೈಶ್ಯನಿದ್ದನು. ಅವನು ಒಮ್ಮೆ ಹೀಗೆ ಬಗೆದನು—

ಬಹಳ ಹಣವಿದ್ದರೂ ಮತ್ತೂ ಗಳಿಸುವ ಉಪಾಯಗಳನ್ನು ಯೋಚಿಸಬೇಕು, ತಕ್ಕಂತೆ ನೆರವೇರಿಸಬೇಕು. ಹಣದಿಂದ ದೊರೆಯದುದು ಯಾವುದೂ ಇಲ್ಲ. ಬುದ್ಧಿವಂತನು ಧನವನ್ನು ಸಾಧಿಸಬೇಕು. ಬೆಟ್ಟಗಳಿಂದ ಹೊಳೆಗಳೆಂಬಂತೆ ಹಣದ ಗಳಿಕೆ ಹೆಚ್ಚುತ್ತಿದ್ದರೆ ಅವೆಲ್ಲಾ ಕೆಲಸಗಳು ಮುನ್ನಡೆಯುತ್ತವೆ. ಯಾರಿಗೆ ಹಣವಿದೆಯೋ ಅವರು ಮುದಿತನ ಬಂದರೂ ಹರೆಯದವರಾಗುತ್ತಾರೆ. ಯಾರು ಹಣವಿಲ್ಲದವರೋ ಅವರು ಹರೆಯದಲ್ಲೂ ಮುದುಕರಾಗುತ್ತಾರೆ.

ಹಣದ ಗಳಿಕೆಯು ಆರು ತೆರದ ಉಪಾಯಗಳಿಂದ ಆಗುವುದು— ಭಿಕ್ಷೆ, ರಾಜಸೇವೆ, ಕೃಷಿಕರ್ಮ, ವಿದ್ಯೋಪಾರ್ಜನ, ವ್ಯವಹಾರ, ವಾಣಿಜ್ಯಗಳು. ಇವುಗಳಲ್ಲಿ ವ್ಯಾಪಾರದಿಂದ ನಿಂದ್ಯವಲ್ಲದ ಗಳಿಕೆ ಆಗುವುದು; ಇತರ ವಿಧಗಳಲ್ಲಿ ಒಂದೊಂದು ತೆರದ ತೊಂದರೆ ಇದೆ, ಅವು ಸಂಶಯಾಸ್ಪದಗಳೂ ಆಹುದು.

ವ್ಯಾಪಾರವು ಏಳು ತೆರವಾಗಿದೆ. ಅವುಗಳಲ್ಲಿ ಬೇರೆಡೆಗೆ ಹೋಗಿ ರಾಶಿಗಟ್ಟಲೆ ಕೊಂಡುದನ್ನು ಬಿಡುವಾಗಿ ಮಾರುತ್ತಾ ಇಮ್ಮಡಿ ಮುಮ್ಮಡಿ ಲಾಭಗಳಿಸುವುದೇ ಚೆನ್ನು— ಎಂದು ಬಗೆದನು.

ವರ್ಧಮಾನನು ವ್ಯಾಪಾರಕ್ಕಾಗಿ ಮಥುರೆಗೆ ಹೋಗಬಯಸಿ, ವಸ್ತ್ರಗಳ ರಾಶಿಯನ್ನು ಕೊಂಡು, ಒಳ್ಳೆಯ ದಿನದಲ್ಲಿ ಮನೆಯಿಂದ ಹೊರಟನು. ತನ್ನ ಮನೆಯಲ್ಲೆ ಹುಟ್ಟಿದ ಸಂಜೀವಕ ಮತ್ತು ನಂದಕಗಳೆಂಬ ಎರಡು ಎತ್ತುಗಳನ್ನು ಗಾಡಿಗೆ ಜೋಡಿಸಿದನು. ಮುಂದೆ ಸಾಗುವಾಗ, ಆ ಸಂಜೀವಕನು ಯಮುನಾನದಿಯ ಕೆಸರಲ್ಲಿ ಕಾಲು ಹೂತುದರಿಂದ ಸಾಗದೆ ನಿಂತಿತ್ತು. ಅದಕ್ಕಾಗಿ ಮೂರು ರಾತ್ರಿ ತಂಗಿದರೂ, ಬರಲಿಲ್ಲ.

"ಸ್ವಲ್ಪಕ್ಕಾಗಿ ತುಂಬ ವೆಚ್ಚ ಮಾಡಬಾರದು, ಸ್ವಲ್ಪದರಿಂದ ತುಂಬ ರಕ್ಷಿಸಬೇಕು" ಎಂಬಂತೆ ಅಪಾಯಗಳು ತುಂಬಿದ ಕಾಡಿನಲ್ಲಿರಬೇಡವೆಂದು ತನ್ನ ಗುಂಪಿನವರು ಎಂದಂತೆ ವರ್ಧಮಾನನು ಎತ್ತಿನ ಕಾವಿಗಾಗಿ ಜನ ವಿಟ್ಟು ಮುನ್ನಡೆದನು.

ಆ ಕಾವಲುಗಾರರು "ಆ ವನವು ಬಹಳ ತೊಂದರೆ ಇರುವಂತಹುದೆಂದು" ತಿಳಿದು, ಸಂಜೀವಕನನ್ನು ಬಿಟ್ಟು, ವ್ಯಾಪಾರಿಯ ಬೆನ್ನಲ್ಲಿ ಹೊರಟು ಮರುದಿನ ಆತನ ಗುಂಪನ್ನು ಸೇರಿದರು. "ಸಂಜೀವಕ ಸತ್ತುದು,

ಧನಿಗೆ ಒಪ್ಪಿತವಾದೀತೆಂದು ತಿಳಿದು ಅದನ್ನು ಬೆಂಕಿಯಿಂದ ಸಂಸ್ಕರಿಸಿದೆವು” ಎಂದು ಸುಳ್ಳಾಡಿದರು. ವ್ಯಾಪಾರಿಯು ಅದನ್ನು ಕೇಳಿ, ಸ್ನೇಹದಿಂದ ಆರ್ದ್ರವಾದ ಹೃದಯವುಳ್ಳವನಾಗಿ, ಆ ಎತ್ತಿಗೆ 'ಅಪರಕ್ರಿಯೆ'ಗಳನ್ನು ತಾನೂ ನೆರವೇರಿಸಿ, ನಡೆದನು.

ಇತ್ತ ಸಂಜೀವಕವು ಆಯುಷ್ಯ ಉಳಿದುದರಿಂದ, ಯಮುನೆಯ ನೀರು ಬೆರೆತ ತಂಗಾಳಿಯಿಂದ ಮೈಗೂಡಿ ಬಂದು ಎದ್ದುಕೊಂಡು ಯಮುನೆಯ ದಡವನ್ನು ಸೇರಿತು. ಅಲ್ಲಿಯ ಎಳೆಹುಲ್ಲುಗಳನ್ನು ಮೇದು, ಕೆಲವು ದಿನಗಳಿಂದ ಶಿವನ ವಾಹನವಾದ ನಂದಿಯಂತೆ ಮೈತುಂಬಿತ್ತು. ದಿನಾಲೂ ತನ್ನ ಕೋಡುಗಳಿಂದ ಹುತ್ತದ ತುದಿಯ ಮಣ್ಣನ್ನು ಎರಚುತ್ತಾ, ಗರ್ಜಿಸುತ್ತಾ ಇತ್ತು. 'ಬೇರೆಯವರು ಕಾಯದಿದ್ದರೂ ದೈವದಿಂದ ರಕ್ಷಿತವಾಗಿ ಇರುವುದು' ಎನ್ನುವುದುಂಟು.

ಆ ಕಾಡಿನಲ್ಲಿದ್ದ ಪಿಂಗಳಕವೆಂಬ ಸಿಂಹವು ಒಮ್ಮೆ ಎಲ್ಲಾ ಮೃಗಗಳಿಂದ ಸುತ್ತುವರಿದುಕೊಂಡು ತಿರುಗುತ್ತಾ, ಬಾಯಾರಿ ಯಮುನೆಯ ನೀರಿಗೆ ಇಳಿಯಿತು. ಆಗ ಆ ಸಂಜೀವಕನ ಗಂಭೀರವಾದ ಗುಡುಗನ್ನು ದೂರದಿಂದಲೇ ಕೇಳಿತು. ಅದರಿಂದ ತಾನು ಹೆದರಿದರೂ, ಮೋರೆ ಮುಚ್ಚಿಕೊಂಡು, ಆಲದ ಅಡಿಗೆ ಹೋಯಿತು. ಅಲ್ಲಿ ತನ್ನೊಂದಿಗರು ಮತ್ತು ಸೇವಕ ಪ್ರಾಣಿಗಳೊಂದಿಗೆ ಚೌಕಾಕಾರವಾಗಿ ಕೂತಿತು.

ಆಗ ಆ ಸಿಂಹದ ಮಂತ್ರಿಪದವಿಯಿಂದ ತಳ್ಳಿಕೊಂಡಿದ್ದರೂ ಅನುಯಾಯಿಗಳಾಗಿ ಇದ್ದ ಕರಟಕ ಮತ್ತು ದಮನಕಗಳೆಂಬ ಎರಡು ನರಿಗಳು ದೂರದಲ್ಲಿ ತಮ್ಮೊಳಗೆ ಹೀಗೆ ಮಾತಾಡುತ್ತಿದ್ದವು.

ದಮನಕ: ಈ ನಮ್ಮ ದೊರೆಯು ನೀರಿಗೆ ಇಳಿದರೂ ಕುಡಿಯದೆ ಮರಳಿಬಂದನು. ಇಲ್ಲಿ ಪ್ರಾಣಿಗಳಿಂದ ಸುತ್ತುವರಿದು ಅದೇಕೆ ಕೂತಿದ್ದಾನೆ?

ಕರಟಕ: ಈ ಕೆಲಸದಿಂದ ನಮಗೇನು? ನಾವೆಂತೂ ಹೊರಗಿನ ಮಂದಿಯಲ್ಲವೇ?

“ಅವ್ಯಾಪಾರೇಷು ವ್ಯಾಪಾರಂಯೋನರಃ ಕರ್ತುಮಿಚ್ಛತಿ |
ಸ ಏವ ನಿಧನಂ ಯಾತಿ ಕೀಲೋತ್ಪಾಟೀವ ವಾನರಃ ||”

(ತಾತ್ಪರ್ಯ: ಬೇಡದ ಕಡೆಯಲಿ ಮನವನು। ಮಾಡುವನಾವನು ಜೀವಿಯಃ।
ಕೇಡನು ಹೊಂದುವನಾತನು। ಕೋಡಗ ಕೀಲೆಳೆದಂತೆ ||)

ದಮನಕ: ಅದೇನು?

ಒಂದನೆಯ ಕತೆ

ಕರಟಕ: ಅದೊಂದು ನಗರದ ಸಮೀಪದಲ್ಲಿ ಆವನೋ ಒಬ್ಬ ವ್ಯಾಪಾರಿಯು ಮರಗಳ ತೋಪಿನ ನಡುವೆ ದೇವಳವೊಂದನ್ನು ಮಾಡಿಸತೊಡಗಿದ್ದನು. ಆತನ ಕೆಲಸಗಾರರು ಮಧ್ಯಾಹ್ನದ ಊಟಕ್ಕೆ ನಗರಕ್ಕೆ ಹೋಗಿ ಬರುವರು. ಒಮ್ಮೆ ಒಬ್ಬ ಕೆಲಸದವನು ಅರೆಸೀಳಿದ 'ಅಂಜನ'ದ ಮರದ ಕಂಬಕ್ಕೆ 'ಖದಿರು' ಕೀಲು ಕೊಟ್ಟು ಹೋಗಿದ್ದನು.

ಆಗ ಅಲ್ಲಿಗೆ ಕೋಡಗಗಳ ತಂಡವೊಂದು ಬಂತು. ಆ ಮಂಗಗಳು ಮರಗಳ ತುದಿಯು ಉಪ್ಪರಿಗೆಯ ವರಾಂಡದಲ್ಲಿ ಅತ್ತಿತ್ತ ಹೋಗುತ್ತಾ ಆಡುತ್ತಿದ್ದುವು. ಸಾವು ಒದಗಿದ ಕೋತಿಯೊಂದು ತನ್ನ ಚಪಲತೆಯಿಂದ ಆ ಮರದ ಕಂಬದಲ್ಲಿ ಕುಳಿತು, ತನ್ನ ಕೈಗಳಿಂದ ಆ ಕೀಲನ್ನು ಎಳೆಯ ತೊಡಗಿತು. ಆಗ ಆ ಎಡೆಕೀಲು ಕಿತ್ತುಹೋಯಿತು. ಅಲ್ಲಿ ಮಂಗದ 'ಅಂಡಕೋಶ'ವು ಸಿಕ್ಕಿದುದರಿಂದ ಅದು ತೀರಿತು. 'ಬೇಡದ ಕಡೆಯಲಿ ಮನವನು ಮಾಡಲಾಗದು.'

ಇಲ್ಲಿ ಉಂಡುಳಿದುದನ್ನು ತಿನ್ನುವ ನಮಗೆ ಈ ಕೆಲಸದಿಂದೇನು ಪ್ರಯೋಜನವು?

ದಮನಕ: ನೀನೇನು ಕೇವಲ ತಿಂಬಾಟಿಕೆಯವನೋ? ನನಗೆ ಅದು ಲೇಸಲ್ಲ. ಗೆಳೆಯರಿಗೆ ಉಪಕಾರಮಾಡಲೂ, ಹಗೆಗಳಿಗೆ ಅಪಕಾರವನ್ನು ಮಾಡಲೂ ರಾಜಾಶ್ರಯವನ್ನು ಬಯಸಬೇಕು. ಹಾಗಲ್ಲದೆ, ಹೊಟ್ಟೆಯೊಂದನ್ನು ಆದಾರು ತುಂಬಿಸಲಿಕ್ಕಿಲ್ಲ?

ಹೊಳೆಯ ದಡದಲ್ಲಿ ಹುಟ್ಟಿದ ಹುಲ್ಲು ಆ ನೀರಿಗೆ ಬಿದ್ದು ಏಳುವ ಜನರಿಗೆ ಕೈಹಿಡಿಯಲು ಬೇಕಾಗಿದೆ, ಅದರ ಜನ್ಮ ಸಫಲವಾಗಿದೆ. ಸ್ತಿಮಿತ ಹಾಗೂ ಉನ್ನತವಾದ ಸಂಚಾರವುಳ್ಳ, ಜನರ ಸಂತಾಪವನ್ನು ಹರಿಸುವ ಮೋಡಗಳಂತೆ ಸಜ್ಜನರು ವಿರಳರು.

ಶಕ್ತವಾದ ಜನವು ಶಕ್ತಿಯನ್ನು ಪ್ರಕಟಿಸದಿದ್ದರೆ ತಿರಸ್ಕಾರವನ್ನು ಹೊಂದುವುದು. ಬೆಂಕಿ ಮರದೊಳಗಿದ್ದರೆ ದಾಟಬಹುದಲ್ಲದೆ, ಉರಿಯುವ ಬೆಂಕಿಯನ್ನು ದಾಟಲಾಗುವುದಿಲ್ಲ!

ಕರಟಕ: ನಾವಿಬ್ಬರೂ ಮುಖ್ಯರಲ್ಲವೆಂದ ಮೇಲೆ ನಮಗೆ ಈ ವ್ಯಾಪಾರವೇಕೆ? ರಾಜನ ಇದಿರಲ್ಲಿ ಕೇಳದೆ ಹೇಳುವ ಕೀಳು ಬುದ್ಧಿಯವನು

ಅಸಮ್ಮಾನವನ್ನೂ ಅಲ್ಲದೆ ತಿರಸ್ಕಾರವನ್ನೂ ಹೊಂದುವನು. ಎಲ್ಲಿ ಫಲಿಸುವುದೋ ಅಲ್ಲಿ ಮಾತು ಹೇಳಬೇಕು, ಕೆಂಬಣ್ಣವು ಬಿಳಿ ಬಟ್ಟೆಯಲ್ಲಿ ತಾನೇ ಹೆಚ್ಚು ಹಿಡಿಯುವುದು!

ದಮನಕ: ಅರಸನ ವಿಚಾರ ಹೀಗಿದೆ. ಅರಸು ತನಗೆ ಒದಗಿದ ವಿದ್ಯಾಹೀನ, ನೀಚ, ಸಂಸ್ಕಾರಹೀನ ಮನುಷ್ಯನನ್ನು ಹೊಂದಿಕೊಳ್ಳುತ್ತಾನೆ. ಅರಸರು, ಹೆಂಗಳು, ಬಳ್ಳಿಗಳು ತಮ್ಮ ಬಳಿ ಇರುವುದನ್ನೇ ಸುತ್ತಿಕೊಳ್ಳುತ್ತಾರೆ.

"ರಾಜರು ಅಸಾಧ್ಯರು, ದುಷ್ಟರೆಂದು" ಯಾರು ಹೇಳುವರೋ, ಅವರು ತಮ್ಮ ಪ್ರಮಾದ ಮೊದಲಾದವನ್ನು ತಾವೇ ಹೇಳಿಕೊಂಡಂತಾಗುವುದು. ಬುದ್ಧಿವಂತರು ಹಾವು, ಹುಲಿ, ಆನೆ, ಸಿಂಗಗಳನ್ನೂ ಉಪಾಯಗಳಿಂದ ಸ್ವಾಧೀನಪಡಿಸುವುದಿದ್ದರೆ ಅರಸನೊಬ್ಬನು ಎಷ್ಟರವನು?

ವಿದ್ವಾಂಸನು ಅರಸನನ್ನು ಹೊಂದಿಯೇ ಮೇಲ್ತನಕ್ಕೆ ಹೋಗುವನು, ಮಲಯವಲ್ಲದೆ ಬೇರೆಡೆ ಚಂದನವು ಮೇಲೇರದು!

ಕರಟಕ: ಹಾಗಾದರೆ, ನೀನೇನು ಮಾಡಲು ಬಯಸುವೆ?

ದಮನಕ: ಹಾಗೆಂದರೇನು? ಹೇಳಿದರೆ ಪಶುವೂ ತಿಳಿಯುವುದು, ಆನೆ ಕುದುರೆಗಳು ಹೇಳಿದಂತೆ ಹೊರುತ್ತವೆ, ಬುದ್ಧಿವಂತನಾದರೋ ಹೇಳದುದನ್ನು ಊಹಿಸುವನು. ಬುದ್ಧಿಯ ಕೆಲಸಗಳೆಂದರೆ 'ಪರರಿಂದ ಊಹಿಸಲ್ಪಟ್ಟ ಫಲಗಳು.'

ಹಾವ ಭಾವ ನಡೆ ನೋಟ ನುಡಿಗಳಿಂದಲೂ, ಕಣ್ಣು ಮೋರೆಗಳ ವಿಕಾರಗಳಿಂದಲೂ ಒಳಗಣ ಮನಸ್ಸು ತಿಳಿಯಲಾಗುವುದು. ನಾನು ಈ ನಮ್ಮ 'ಭಯಾಕುಲ'ನಾದ ರಾಜನನ್ನು ಸಮೀಪಿಸಿ, ಸ್ವಬುದ್ಧಿಯ ಪ್ರಭಾವದಿಂದ ನಿರ್ಭಯನಾಗಿ ಮಾಡಿ, ವಶೀಕರಿಸಿ, ನನ್ನ ಮಂತ್ರಿಪದವಿಯನ್ನು ತಿರುಗಿ ಗಳಿಸುವೆನು.

ಕರಟಕ: ಆದರೆ, ಸೇವಾಧರ್ಮವನ್ನು ಅರಿಯದ ನೀನು ಈತನನ್ನು ವಶಗೊಳಿಸುವುದು ಹೇಗೆ?

ದಮನಕ: ಧೌಮ್ಯನು ವಿರಾಟನಗರದ ಪ್ರವೇಶದ ಕಾಲದಲ್ಲಿ ಪಾಂಡವರಿಗೆ ಹೇಳಿದ ಸೇವಾಧರ್ಮವು ತಿಳಿದಿದೆ. ಶೂರನು, ವಿದ್ಯಾವಂತನು, ಸೇವಿಸಲು ಬಲ್ಲವನು ಎಂಬೀ ಮೂವರು ಭೂಮಿಯನ್ನು ಚಿನ್ನದ ಹೂವುಳ್ಳ

ದನ್ನಾಗಿ ಆಯ್ದುಕೊಳ್ಳುವರು. ದ್ರವ್ಯ, ಪ್ರಕೃತಿಗಳು ಇಲ್ಲದಿದ್ದರೂ ಸೇವಿಸ ತಕ್ಕ ಗುಣಗಳಿಂದ ಕೂಡಿದವನನ್ನು ಸೇವಿಸಿದರೆ ಕಾಲಾಂತರದಲ್ಲಾದರೂ ಸೇವೆಯ ಫಲವಾದ ಬಾಳಿಕೆಯು ದೊರೆಯುವುದು.

ಹಸಿವುಗೊಂಡ ಸೇವಕರು ಯಾವಾತನನ್ನು ಸೇವಿಸಿ ವಿಶ್ರಾಮವನ್ನು ಪಡೆಯಲಾರರೋ ಅಂತಹ ದೊರೆಯು ಸದಾ ಪುಷ್ಪಫಲಗಳುಳ್ಳ ಎಕ್ಕೆಯಂತೆ ತ್ಯಾಜ್ಯನು.

"ನಾನು ದೊರೆಗೆ ನಿತ್ಯವೂ ಸಮ್ಮತನೆಂದು" ಯಾವನು ಕಷ್ಟದಲ್ಲೂ ಮರ್ಯಾದೆಯನ್ನು ಮೀರುವುದಿಲ್ಲವೋ ಆತನೇ ರಾಜನಿಗೆ ಪ್ರೀತಿಯವನಾಗುವನು. ಯುದ್ಧಕಾಲದಲ್ಲಿ ಮುಂದೆ, ಊರಲ್ಲಿ ಹಿಂದೆ, ಮನೆಯಲ್ಲಿ ಬಾಗಿಲಬಳಿ ಇರುವ ಸೇವಕನೇ ರಾಜನ ಪ್ರೀತಿಯವನಾಗುವನು ಇತ್ಯಾದಿ ನೀತಿಗಳಿವೆ!

ಕರಟಕ: ನೀನು ಹೋಗಿ ಸಿಂಹನಲ್ಲಿ ಏನೆಲ್ಲಾ ಹೇಳುವಿಯೆಂದು ಮೊದಲಾಗಿ ತಿಳಿಸು.

ದಮನಕ: ಒಳ್ಳೆಯ ಮಳೆಯಿದ್ದರೆ ಬಲಿತ ಬೀಜದಿಂದ ಬೇರೆ ಬೀಜವು ಉಂಟಾಗುವಂತೆ ನನ್ನ ಉತ್ತರವಾಕ್ಯವು ಅವರ ಉತ್ತರದಿಂದಲೇ ಹುಟ್ಟುವುದು. ಸಮಯಕ್ಕೆ ಬೇಡದುದನ್ನು ಹೇಳಿದರೆ ಬೃಹಸ್ಪತಿಯೂ ತಿರಸ್ಕಾರ ಮತ್ತು ತುಂಬಾ ಅಪಮಾನವನ್ನು ಪಡೆಯುವನು.

ಕರಟಕ: ಆದರೆ, ಎಲ್ಲರೂ ತಲೆಬಾಗುವ ರಾಜರ ಎಡೆಯು ಏರತಕ್ಕುದಲ್ಲ. ಕೊಂಚ ಅಪಕಾರದಿಂದಲೂ 'ಬ್ರಾಹ್ಮಣ್ಯ'ದಂತೆ ರಾಜಪರಿಚಯವು ಕೆಡುವುದು.

ದಮನಕ: ಅದಕ್ಕೆ ಅವರವರ ಭಾವವನ್ನು ಅನುಸರಿಸಿ ವಶೀಕರಿಸಬೇಕು. ದೊರೆಯು ಕೋಪಗೊಂಡರೆ ಹೊಗಳಿಕೆಯೂ, ಅವನ ಅಭಿಪ್ರಾಯದಲ್ಲಿ ಪ್ರೇಮವೂ, ಅವನ ಹಗೆಯಲ್ಲಿ ಹಗೆಯೂ, ಅವನ ಕೊಡುಗೆಯ ಪ್ರಶಂಸೆಯೂ ಮಂತ್ರತಂತ್ರಗಳಿಲ್ಲದ ವಶೀಕರಣವಾಗಿದೆ.

ಕರಟಕ: ಹೀಗಾದರೆ ನಿನ್ನ ದಾರಿ ಒಳ್ಳಿತಾಗಲಿ, ಇಷ್ಟದಂತೆ ನಡೆ. ದಮನಕನು ಗೆಳೆಯನಿಗೆ ವಂದಿಸಿ, ಸಿಂಹಕ್ಕೆ ಇದಿರಾಗಿ ಸಾಗಿತು. ಆ ಸಿಂಹವು ಬರುತ್ತಿರುವ ದಮನಕನನ್ನು ನೋಡಿ, ಪಹರೆಯವನಿಗೆ ಹೇಳಿತು: ಈ 'ಕಟ್ಟೆಕೋಲು' ತೆಗೆ. ಈ ನಮ್ಮ ಹಳೆಯ ಮಂತ್ರಿಪುತ್ರನು ಬರುತ್ತಿರುವನು. 'ಯಥಾರ್ಥವಾದಿ'ಯಾದ ಆತನನ್ನು ಒಳಕ್ಕೆ ಬಿಡು—ಎಂದು.

ದಮನಕನು ಬಾಗಿಲ ಒಳಹೊಕ್ಕು ನಮಸ್ಕರಿಸಿತು. ಸಿಂಹನು ಅನುಮತಿಸಿದಂತೆ ಕೂರಿತು. ಸಿಂಹವು ಉಗುರುಗಳಿಂದ ಸೊಬಗಾದ ತನ್ನ ಬಲಗೈಯನ್ನು ಎತ್ತಿ ಮರ್ಯಾದಾಪೂರ್ವಕ ಹೇಳಿತು—ನಿನಗೆ ಮಂಗಳವಷ್ಟೆ! ಬಹುಕಾಲದ ಮೇಲೆ ಅದೇನು ಕಾಣಬಂದೆ?

ದಮನಕನು ಬಿನ್ನವಿಸಿದನು: ದೇವರಿಗೆ ನಮ್ಮಿಂದ ಅದೇನೂ ಪ್ರಯೋಜನವಿಲ್ಲವಾದರೂ, ನಾವು ಕಾಲೋಚಿತವಾದುದನ್ನುಹೇಳಬೇಕು. ಉತ್ತಮ ಮಧ್ಯಮ ಅಧಮರಿಂದಲೂ ರಾಜರಿಗೆ ಪ್ರಯೋಜನವಿದೆ. ಹುಲ್ಲುಕಡ್ಡಿಗಾಗಿಯೋ, ಕಿವಿಸಟ್ಟುಗಕ್ಕಾಗಿಯೋ ಹುಲ್ಲಿನ ಉಪಕಾರವಿದೆ; ಮಾತು ಕೈಗಳುಳ್ಳ ಮಾನವನಿಂದ ಉಪಕಾರವಿದೆಯೆಂದು ಹೇಳಬೇಡವೇ? ನಾವು ಸ್ವಾಮಿಯ ಕುಲಾನುಗತರಾದ ಸೇವಕರು. ಕಷ್ಟಕಾಲದಲ್ಲಿ ಸ್ವಾಮಿಯ ಹಿಂಬಾಲುಗಳಾದರೂ ನಮ್ಮ ಅಧಿಕಾರವನ್ನು ಹೊಂದಲಿಲ್ಲ. ಆದರೂ ಸ್ವಾಮಿಗೆ ಇದು ತಗುವುದಲ್ಲ.

ಸೇವಕರು ಮತ್ತು ಆಭರಣಗಳನ್ನು ಆಯಾ ಸ್ಥಾನಗಳಲ್ಲಿ ಇರಿಸಬೇಕು, ಚೂಡಾಮಣಿಯನ್ನು ಕಾಲಲ್ಲಿ ಕಟ್ಟುವುದಲ್ಲ. ಉನ್ನತಸ್ಥಾನಕ್ಕೆ ಯೋಗ್ಯರಾದ ಸೇವಕರನ್ನು ಹೀನಾಧಮಸ್ಥಾನದಲ್ಲಿ ಅವಿವೇಕದಿಂದ ಇರಿಸುವುದಿದ್ದರೆ ಅವರು ಅಲ್ಲಿ ಇರಲಾರರು. ಅದು ಅರಸನ ದೋಷವಲ್ಲದೆ ಅವರದಲ್ಲ. ಚಿನ್ನದ ಒಡವೆಗೆ ತಕ್ಕುದಾದ ಮಣಿಯನ್ನು ಸೀಸದಲ್ಲಿ ಕಟ್ಟುವುದಾದರೆ ಅದು ಕಳೆಗೂಡದು, ಅದರಿಂದ ಜತೆಗೊಳಿಸುವವನು ನಿಂದ್ಯನಾಗುತ್ತಾನೆ.

ಅರಸು ಆಳುಗಳಲ್ಲಿ ಒಂದರಿಂದ ಹೊರತು ಇನ್ನೊಂದಿಲ್ಲ, ಅವರ ವ್ಯವಹಾರವು ಅನ್ಯೋನ್ಯವಾದ ಕಟ್ಟುಳ್ಳದು. ಅಚ್ಚುಮರವು ಅರಗಳಿಂದ ಧರಿಸಲ್ಪಡುತ್ತಿದೆ, ಅಚ್ಚಿನಲ್ಲಿ ಅರಗಳು ಸೇರಿರುತ್ತವೆ. ಅರಸು ಆಳುಗಳ ವರ್ತನೆಯ ಚಕ್ರವೂ ಹೀಗೆ ನಡೆವುದು.

ಅರಸನು ಯಾವನಲ್ಲಿ ಕೆಲಸವಿಂಸಿ ನಿಶ್ಯಂಕೆಯಿಂದ ಇರಬಹುದೋ ಆ ಆಳು 'ಇನ್ನೊಂದು ಹೆಂಡತಿ'ಯಂತೆ ಇರುವನು. ಯಾರೂ ಕರೆಯದೆ ಯಾವಾತನು ಬಂದು ಬಾಗಿಲಲ್ಲಿ ಯಾವಾಗಲೂ ಇರುವನೋ, ಕೇಳಿದರೆ ಸತ್ಯ ಹಾಗೂ ಮಿತವಾಗಿ ಹೇಳುವನೋ ಆ ಆಳು ಅರಸರಿಗೆ ತಕ್ಕವನು. ಯಾವನಿದ್ದರೆ 'ಬೆಂಕಿಯಲ್ಲಿ ಚರ್ಮದಂತೆ' ರಾಜ್ಯದ ಸೀಮೆ ಸಣ್ಣದಾಗುವುದೋ ಅಂತಹ ಆಳನ್ನು ರಾಜ್ಯದ ಆಶೆಪಡುವ ರಾಜನು ಬಿಡಬೇಕು.

ಇದೊಂದು ನರಿಯೆಂದು ಸ್ವಾಮಿಯು ನನ್ನಲ್ಲಿ ತಿರಸ್ಕರಿಸಿದರೆ ಚೆನ್ನಲ್ಲ. ಪಟ್ಟೆಬಟ್ಟೆಯು ಹುಳುವಿನಿಂದ ಹುಟ್ಟಿತು, ಚಿನ್ನವು ಕಲ್ಲಿನಿಂದ ಹುಟ್ಟಿತು, ಕರಿಕೆ ಹುಲ್ಲು ಗೋವಿನ ರೋಮದಿಂದ ಹುಟ್ಟಿತು, ತಾವರೆಹೂವು ಕೆಸರಿಂದ ಹುಟ್ಟಿತು, ಚಂದಿರವು ಕಡಲಿಂದ ಹುಟ್ಟಿತು, ಕನ್ನೈದಿಲೆಯು ಗೋವಿನಸೆಗಣಿಯಿಂದ ಹುಟ್ಟಿತು, ಬೆಂಕಿಯು ಕಟ್ಟಿಗೆಯಿಂದ ಹುಟ್ಟಿತು, ಮಣಿಯು ಜಡೆಯಿಂದ ಹುಟ್ಟಿತು, ಗೋರೋಚನವು ಗೋವಿನ ಪಿತ್ತದಿಂದ ಹುಟ್ಟಿತು, ಗುಣವಂತರು ತಮ್ಮ ಗುಣೋದಯದಿಂದಲೆ ಪ್ರಕಾಶತೆ ಹೊಂದುವರಲ್ಲದೆ ಹುಟ್ಟಿನಿಂದಲ್ಲ!

ಅಸಮರ್ಥನಾಗಿ ಸೇವಿಸುತ್ತಲೂ, ಸಮರ್ಥನಾಗಿ ಅಪಕರಿಸುತ್ತಲೂ ಇದ್ದರೆ ಗುಣವೇನು? ನಾನು ಶಕ್ತನೂ ಭಕ್ತನೂ ಆಗಿದ್ದೇನೆ. ಆದದರಿಂದ ನನ್ನನ್ನು ನೀಚಗಳೆಯಬೇಡ.

ಪಿಂಗಳಕ: ಹಾಗಾಗಲಿ, ನೀನು ಶಕ್ತನಾಗು, ಅಶಕ್ತನಾಗು. ಬಹು ಕಾಲದ ಮಂತ್ರಿಯಮಗನಾಗಿದ್ದಿಯಲ್ಲಾ! ಏನು ಹೇಳಬೇಕೆಂದು ಇದ್ದಿಯೋ ಎಲ್ಲವನ್ನೂ ನಂಬುಗೆಯಿಂದ ಹೇಳು.

ದಮನಕ: ಸ್ವಾಮೀ! ಅರಸನ ಅಲ್ಪವಾದ ಕಾರ್ಯವನ್ನು ಸಭಾಮಧ್ಯದಲ್ಲಿ ಹೇಳಲಾಗದೆಂದು ಬೃಹಸ್ಪತಿಯ ಮತವಿದೆ. ಅದುಕಾರಣ, ಏಕಾಂತದಲ್ಲಿ ನಾನು ಹೇಳುವುದನ್ನು ದೇವರು ಲಾಲಿಸಬೇಕು. ಆರು ಕಿವಿಗಳಲ್ಲಿ ಮಾಡಿದ ಗುಟ್ಟಿನ ಯೋಚನೆ ಬಟ್ಟಬಯಲಾಗುವುದು. ಬುದ್ಧಿವಂತರು ಹಾಗೆ ಮಾಡಲಾಗದು.

ಆಗ ಸಿಂಹದ ಮಾತಿನಂತೆ ಸುತ್ತಲ ಮಂದಿ ಅಲ್ಲಿಂದ ಚದರಿತು. ಮತ್ತೆ ಸಂವಾದ ತೊಡಗಿತು.

ದಮನಕ: ನೀರಿಗೆ ಇಳಿದ ದೇವರು ಹೀಗಿರಲು ಕಾರಣವೇನು?

ಪಿಂಗಳಕ: (ನಗೆ ಹಾಗೂ ನೋಟದಿಂದ ಕೂಡಿ) ಏನಿಲ್ಲ!

ದಮನಕ: ಹೇಳಬಾರದುದು ಆದರೆ ಇರಲಿ. ಹೆಂಡಿರು, ತನ್ನವರು, ಗೆಳೆಯರು, ಮಕ್ಕಳಲ್ಲಿ ಕೆಲಕೆಲವನ್ನು ಗುಟ್ಟಾಗಿರಿಸಬೇಕು. ಇದು ತಕ್ಕುದೋ ಅಲ್ಲವೋ ಎಂದು ಯೋಚಿಸಿ, ಮಹತ್ವದ ಪ್ರೇರಣೆಯಿಂದ ಮತ್ತೆ ಹೇಳಬೇಕು.

ಪಿಂಗಳಕನು ಈ ಮಾತನ್ನು ಕೇಳಿ ತನ್ನೊಳಗೆ ಯೋಚಿಸಿತು—ಇವನು ಯೋಗ್ಯನು. ಇವನಲ್ಲಿ ನನ್ನ ಒಳಬಗೆತವನ್ನು ಹೇಳುವೆ. ಗುಣಭೇದವನ್ನು

ತಿಳಿವ ರಾಜನಲ್ಲೂ, ಗುಣವಂತನಾದ ಸೇವಕನಲ್ಲೂ, ಅನುವರ್ತಿನಿಯಾದ ಹೆಂಡತಿಯಲ್ಲೂ, 'ಉಪಚಾರ'ಯಲ್ಲದ ಮಿತ್ರನಲ್ಲೂ ದುಃಖವನ್ನು ಹೇಳಿದರೆ ಕೊಂಚ ಸುಖವಾಗುವುದು—ಎಂದು.

ಆ ಮೇಲೆ ಸಿಂಹವು ಸರಿಗೆ ಹೇಳಿತು: ದೂರದಿಂದ ದೊಡ್ಡದೊಂದು ಸದ್ದನ್ನು ಕೇಳುತ್ತೀಯಲ್ಲವೆ? ನಾನು ಅದಕ್ಕಾಗಿ ಈ ಕಾಡಿನಿಂದ ಬೇರೆಡೆಗೆ ಹೋಗಲು ಬಯಸುವೆನು. ಇಲ್ಲಿಗೆ ಒಂದು ದೊಡ್ಡ ಪ್ರಾಣಿ ಬಂದಿದೆ, ಅದರದೇ ಆ ಸದ್ದು. ಅದು ಈ ಶಬ್ದಕ್ಕೆ ತಕ್ಕುದಾದ ಪರಾಕ್ರಮದಿಂದ ಕೂಡಿರಬೇಕು.

ದಮನಕ: ದೇವರು ▪ ಸದ್ದಿನಿಂದಲೇ ಹೆದರುವುದು ಸೊಗಸು ಅಲ್ಲ. ಹಿಂದಿನಿಂದಲೂ ಬಂದ ಈ ಕಾಡನ್ನು ಬಿಡುವುದು ಲೇಸಲ್ಲ. ಶಬ್ದಗಳು ಭೇರಿ ಮೊದಲಾದ ಭೇದದಿಂದ ಅನೇಕ ವಿಧಗಳಾಗಿವೆ. ಆ ಸದ್ದು ಏನೆಂದು ತಿಳಿಯದೆ ಹೆದರುವುದಲ್ಲ.

ಎರಡನೆಯ ಕತೆ

"ಪೂರ್ವಮೇವ ಮಯಾ ಜ್ಞಾತಂ ಪೂರ್ಣಮೇತದ್ಧಿ ಮೇದಸಾ |
ಅನುಪ್ರವಿಶ್ಯ ವಿಜ್ಞಾತಂ ಯಾವಚ್ಚರ್ಮ ಚ ದಾರುಚ ||"

—(ಸಾರಾಂಶ: ಮೊದಲಿನಗೆ ತಿಳಿದಿತ್ತು | ಮೇದಸ್ಸು ತುಂಬಿದುದು |
ಹುದುಗೊಳಿಸಿ ನೋಡೆ ಚ | ರ್ಮದ ಮರವಿದು ||)

—ಎಂದೊಂದು ನರಿಯು ಮಾತು ಇದೆ. ಅದು ಹೇಗೆಂದರೆ—

ಹಸಿವೆಯಿಂದ ಬತ್ತಿದ ಕುತ್ತಿಗೆಯ ಅದೊಂದು ನರಿಯು ಆಹಾರಕ್ಕಾಗಿ ಅತ್ತಿತ್ತ ತಿರುಗಾಡಿ, ಯುದ್ಧಭೂಮಿಯನ್ನು ಕಂಡಿತು. ಅಲ್ಲಿ ಗಾಳಿಯ ಅಲೆತದಿಂದ ಬಳ್ಳಿಗಳ ಹೊಡೆತದ ದುಂದುಭಿಯ ದನಿಯು ಕೇಳಿ ಬಂತು. ಆಗ ನರಿಯು ಕಳವಳಗೊಂಡು ಚಿಂತಿಸಿತು: ಅಯ್ಯೋ, ನಾನು ಸತ್ತೆನು. ಈ ಸದ್ದಿಗೆ ತುತ್ತಾಗದ ಮೊದಲೇ ಪಾರಾಗುವೆನು. ಅಥವಾ ಮುತ್ತಾತಂದಿರ ಮೊದಲ್ಗೊಂಡು ಸೇರಿದ ಈ ಕಾಡನ್ನು ಒಡನೆ ಬಿಡುವುದು ಒಳ್ಳಿತಲ್ಲ.

ಕಷ್ಟಸುಖಗಳು ಬಂದರೂ ಒಡನೆ ವಿಚಾರಿಸದೆ ಕೆಲಸಮಾಡಿದವನು ಪಶ್ಚಾತ್ತಾಪಕ್ಕೆ ಗುರಿಯಾಗಲಿಕ್ಕಿಲ್ಲ. ಹಾಗೆ ಇದೇನೆಂದು ತಿಳಿವೆನೆಂದು ನರಿಯು ಧೈರ್ಯವಾಗಿ ಮೆಲ್ಲಮೆಲ್ಲನೆ ನಡೆದು ಬಂದಾಗ, ಆ ದುಂದುಭಿಯನ್ನು ಕಂಡಿತು.

ನರಿಯು ಅದನ್ನು ಸಮೀಪಿಸಿ ತಾನೂ ಹೊಡೆಯಿತು, ಮತ್ತೆ ಸಂತಸದಿಂದ ಯೋಚಿಸಿತು—ಬಹುಕಾಲದಿಂದ ಈ ದೊಡ್ಡ ತಿನಿಸು ಸಿಕ್ಕಿತು. ಇದು ತುಂಬಾ ಮಾಂಸಾದಿಗಳಿಂದ ತುಂಬಿರಬೇಕು—ಎಂದು.

ಆ ದುಂದುಭಿಯ ಒಣ ತೊವಲನ್ನು ಹೇಗಾದರೂ ಮಾಡಿ ಹರಿಯಿತು. ದುಂದುಭಿಯು ಒಂದೆಡೆಯಲ್ಲಿ ಒಳನುಗ್ಗಿತು. ಆಗ ನರಿಯ ಹಲ್ಲು ಕಿತ್ತುಹೋದುದು. ಒಳಗಡೆ ಬರಿಯ ಮರವನ್ನು ಕಂಡಿತು. 'ಮೊದಲೆನಗೆ ತಿಳಿದಿತ್ತು ಮೇದಸ್ಸು ತುಂಬಿದುದು.' ಆದುದರಿಂದ ಪರೀಕ್ಷೆ ಮಾಡಿಯೇ ತಿಳಿಯಬೇಕು.

ಪಿಂಗಲಕ: ನೋಡು, ಈ ನನ್ನ ಬಳಗವೆಲ್ಲ ಹೆದರಿ ಓಡಲಿದೆ. ನಾನು ಹೇಗೆ ಧೈರ್ಯವನ್ನು ತಾಳಲಿ?

ದಮನಕ: ಸ್ವಾಮೀ! ಅದು ಅವುಗಳ ದೋಷವಲ್ಲ. ಸ್ವಾಮಿಗೆ ತಕ್ಕ ಸೇವಕರು ಅವರು. ಕುದುರೆ ಶಸ್ತ್ರ ಶಾಸ್ತ್ರ ವೀಣೆ ವಾಣಿ ನರ ನಾರಿಯರು ತಾವು ಹೊಂದಿಕೊಂಡ ಪುರುಷನಂತೆ ಯೋಗ್ಯರೋ ಅಯೋಗ್ಯರೋ ಆಗುವರು. ನಾನೀಗ ಈ ಸದ್ದಿನ ಸಂಗತಿ ತಿಳಿದು ಬರುವ ತನಕ ನೀನು ಧೈರ್ಯದಿಂದ ಕಾದಿರು. ಮತ್ತೆ ಬೇಕಾದುದನ್ನು ಮಾಡಬಹುದು.

ಪಿಂಗಲಕ: ನೀನು ಅಲ್ಲಿಗೆ ಹೋಗಲು ಬಯಸುವಿಯಾ?

ದಮನಕ: ಸ್ವಾಮಿಯ ಅಪ್ಪಣೆಯಿಂದಾಗಿ ಒಳ್ಳೆಯ ಸೇವಕನಿಗೆ ಮಾಡತಕ್ಕುದೋ ಮಾಡಬಾರದುದೋ ಎಂದಿಲ್ಲ.

ಪಿಂಗಲಕ: ಹಾಗಾದರೆ ಹೋಗಿ ಬಾ. ನಿನಗೆ ಒಳ್ಳೆತಾಗಲಿ.

ದಮನಕನು ಸಿಂಹಕ್ಕೆ ವಂದನೆಮಾಡಿ, ಆ ಶಬ್ದಕ್ಕೆ ಅನುಸಾರವಾಗಿ ಹೊರಟಿತು. ಇತ್ತ ಪಿಂಗಲಕನು ಚಿಂತಿಸಿದನು—ಆ ದಮನಕನಲ್ಲಿ ನಂಬುಗೆಯಿಟ್ಟು ನನ್ನ ಯೋಚನೆಯನ್ನು ಹೇಳಿದುದು ಸರಿಯಲ್ಲ. ಅವನು ಇಲ್ಲಿಯೂ ಅಲ್ಲಿಯೂ ಎರಡು ಕಡೆಗಳಲ್ಲಿ ಲಾಭಹೊಂದಿದವನಾಗಿ ನನ್ನ ಮೇಲೆ ಸಾಗಿಬಂದರೆ ಏನು ಮಾಡಲಿ? ಅದರ ಬಗೆಯನ್ನು ತಿಳಿಯಲು ನಾನು ಬೇರೆಡೆಗೆ ಹೋಗಿ ಕಾಯುವೆ. ಬುದ್ಧಿವಂತನು ಹಗೆಯಲ್ಲಿ ನಂಬುಗೆಯನ್ನು ಇಡಬಾರದು, ಇಂದ್ರನು ನಂಬಿಗೆಯಿಂದಲೆ ದಿತಿಯ ಗರ್ಭವನ್ನು ಕಳೆದಿದ್ದನು—ಎಂದು. ಹಾಗೆ ಅಲ್ಲಿಂದೆದ್ದು ಬೇರೆಡೆ ಹೋಯಿತು

ದಮನಕನು ಸಂಜೀವಕನೆಂಬ ಎತ್ತಿನ ಬಳಿ ಸಾರಿತು. ಅದು ಒಂದು ಎತ್ತು ಎಂದು ತಿಳಿದು ಚಿಂತಿಸಿತು—ಚೆನ್ನಾಯ್ತು! ಇದರ ಸಂಧಿ—ವಿಗ್ರಹ

ಮೂಲಕ ಪಿಂಗಲಕನು ನನ್ನ ವಶನಾಗುವನು. ಆಪತ್ತನ್ನು ಹೊಂದಿದ ರಾಜನು ಮಂತ್ರಿಗಳಿಗೆ ಭೋಗಿಸತಕ್ಕವನು ಆಗುವನು. ಮಂತ್ರಿಗಳು ಆಪತ್ತು ಹೊಂದಿದ ಅರಸನನ್ನು ಆಶಿಸುವರು. ನಿರೋಗಿಯು ವೈದ್ಯನನ್ನು ಬಯಸುವುದಿಲ್ಲ—ಎಂದು. ಅಲ್ಲಿಂದ ಮರಳಿ ಸಿಂಗದೆಡೆಗೆ ಹೋಯಿತು.

ಸಿಂಹವು ಬರುತ್ತಿರುವ ದಮನಕನನ್ನು ಕಂಡು, ತನ್ನ ಚೇಷ್ಟೆಗಳನ್ನು ಉಡುಗಿಸಿತು. ದಮನಕನು ಸಿಂಗದೊಡನೆ ಮಾತಾಡಿತು.

ದಮನಕ: ಸ್ವಾಮೀ! ನಾನು ಹೋಗಿ ಅದನ್ನು ನಿಜವಾಗಿ ನೋಡಿ ಬಂದೆನು. ಈ ಬಗ್ಗೆ ಕೆಡುಕನ್ನು ಕಾಣಲಾರೆನು. ಏಕೆಂದರೆ, ಶುಭಾಶುಭಗಳ ಫಲವು ಅರಸನಿಂದ ಕೂಡಲೇ ದೊರಕುವುದು, ದೇವರಿಂದ ಜನ್ಮಾಂತರಕ್ಕೆ ಸಿಗುವುದು, ದೇವತಾತ್ಮನಾದ ಅರಸನಿಗೆ ದೇವರಿಗಿಂತ ಇದೊಂದು ಹೆಚ್ಚಳವಿದೆ.

ಪಿಂಗಲಕ: ನೀನು ನಿಜವಾಗಿ ಕಂಡಿರುವಿ. ಮಹಾತ್ಮರು ದೀನನಲ್ಲಿ ಸಿಟ್ಟುಗೊಳ್ಳರೆಂಬಂತೆ, ನೀನೂ-ಅತನಿಂದ ತಳ್ಳಲ್ಪಟ್ಟಿಲ್ಲ. ಕೆಳಬಾಗಿದ ಹುಲ್ಲನ್ನು ಗಾಳಿ ಕೀಳುವುದಿಲ್ಲ. 'ಮಹಾಬಲಿಷ್ಠ'ರ ಸ್ವಭಾವವೆಂದರೆ ಉನ್ನತನಲ್ಲೇ ಹೋರಾಟವು!

ದಮನಕ: ನಾವು ಬಡವರು, ಅತನು ಮಹಾತ್ಮನೇ ಸೈ! ಸ್ವಾಮಿ ಹೇಳಿದರೆ ಈ ಕೆಲಸದಲ್ಲಿ ನಾನು ಆಳಾಗುವೆನು. ಬುದ್ಧಿಗೆ ಅಸಾಧ್ಯವೇನು?

ಪಿಂಗಲಕ: ಹಾಗಾದರೆ ನೀನು ಮಂತ್ರಿಯಾಗು. ಇಂದಿನಿಂದ ಅನುಗ್ರಹನಿಗ್ರಹಾದಿಗಳನ್ನು ನೀನೇ ಮಾಡುತ್ತಿರು.

ದಮನಕನು ಈ ಮಾತನ್ನು ಕೇಳಿ ಅಲ್ಲಿಂದ ಹೊರಟು ಎತ್ತಿನ ಬಳಿಗೆ ಹೋಯಿತು. ಅಲ್ಲಿ ಅದನ್ನು ಧಿಕ್ಕರಿಸಿ ನುಡಿಯಿತು—ಎಲ್ಲೈ ಬಾ, ಸ್ವಾಮಿಯಾದ ಪಿಂಗಲಕನು ಕರೆಯುವನು. ಇಲ್ಲಿ ನಿಶ್ಶಂಕೆಯಿಂದ ಏಕೆ ಗೂಳಿಡುವೆ?

ಸಂಜೀವಕ: ಪಿಂಗಲಕನು ಎಂದರೆ ಯಾರು?

ದಮನಕ: ಸ್ವಾಮಿಯನ್ನು ತಿಳಿಯೆಯಾ? ಕೊಂಚ ತಾಳು ಫಲದಿಂದ ತಿಳಿಯುವೆ. ಪಿಂಗಲಕನೆಂದರೆ ಆಲದ ಅಡಿಯಲ್ಲಿ ಕುಳಿತ ಸಿಂಹವು!

ಈ ಮಾತು ಕೇಳಿ ಎತ್ತಿಗೆ ಪ್ರಾಣ ಹಾರಿದಂತಾಯಿತು, ದಮನಕನ ಕೂಡೆ ಹೇಳಿತು—ನೀನು ಚೆನ್ನಾಗಿ ಮಾತಾಡುವಿ. ಅಲ್ಲಿಗೆ ನನ್ನನ್ನು ಒಯ್ಯುವಿಯಾದರೆ, ಸ್ವಾಮಿಯಿಂದ ಅಭಯದಾನದ ಅನುಗ್ರಹವನ್ನು ಮಾಡಿಸಬೇಕು.

ದಮನಕನು—ಅದಕ್ಕೆ ತಕ್ಕ ಹೊತ್ತು ತಿಳಿದು ಬಂದು ಕರೆವೆ-ನೆಂದು ಹೇಳಿ, ಸಿಂಹದ ಬಳಿ ಬಂದು ಹೇಳಿಕೊಂಡಿತು—ಅದು ಬರಿಯ ಎತ್ತು ಅಲ್ಲ, ಭಗವಾನ್ ರುದ್ರನ ವಾಹನವಾದ ವೃಷಭನೇ ಸೈ! ಅದಕ್ಕೆ ಯಮುನಾತಟದ ಹುಲ್ಲು ಮೇಯಲು ಮತ್ತು ಆಡುತ್ತಿರಲು ರುದ್ರನು ಕೊಟ್ಟಿದಂತೆ!

ಪಿಂಗಲಕ: ಹುಲ್ಲನ್ನು ಮೇಯುವ ಹಸುಗಳು ದೈವಬಲವಿಲ್ಲದೆ ಈ ದುಷ್ಟಮೃಗಗಳಿಂದ ತುಂಬಿದ ಕಾಡಿನಲ್ಲಿ ಹೀಗೆ ಗುಡುಗುಡಿಸಿ ತಿರುಗಲಾರವು. ಅದಕ್ಕೆ ನೀನೇನು ಹೇಳಿದೆ?

ದಮನಕ: ಈ ಕಾಡು ಚಂಡಿಕೆಯ ವಾಹನವಾದ ಪಿಂಗಲಕನ ನಾಡು. ಇಲ್ಲಿ ನೀನೊಬ್ಬ ಅತಿಥಿಯಾದೆ. ಅಲ್ಲಿಗೆ ಹೋಗಿ ನೀವಿಬ್ಬರೂ ಸೋದರ ಸ್ನೇಹದಿಂದ ಊಟ ಆಟ ಕೆಲಸಗಳನ್ನು ಮಾಡುತ್ತಾ, ಒಂದೆಡೆಯಲ್ಲೆ ಬೆರೆತು ಕಾಲವನ್ನು ಕಳೆಯಬಹುದು ಎಂದು ಹೇಳಿದೆನು. ಅದು ಆ ಮಾತನ್ನು ಒಪ್ಪಿ ಅಭಯದಾನಕ್ಕೆ ಆಶಿಸಿದೆ.

ಪಿಂಗಲಕ: ಬಹಳ ಚೆನ್ನಾಯ್ತು! ನೀನು ನನ್ನ ಎದೆಯಲ್ಲಿ ಬೆರೆತು ಹೇಳಿದೆ. ನಮ್ಮಿಬ್ಬರಲ್ಲಿ ಅಭಯದ ಕೊಡುಗೆಗಳಾಗಲು, ಗಟ್ಟಿ ಕಂಬಗಳಿಂದ ಮನೆಯೆಂಬಂತೆ, ಮಂತ್ರಿಗಳಿಂದ ರಾಜ್ಯದ ಧಾರಣೆಯಾಗುವುದು. ಯೋಚನೆಯ ಎರಕವು ಒಡೆದಾಗ ಮಂತ್ರಿಗಳಿಗೂ, ಸನ್ನಿಪಾತ ಜ್ವರದಲ್ಲಿ ವೈದ್ಯರಿಗೂ ಏನು ಮಾಡಬೇಕೆಂಬ ಕೆಲಸದ ಬುದ್ಧಿ ಮಂಕಾಗುವುದು. ಸುಮ್ಮನಿದ್ದಾಗ ಯಾರು ಗಟ್ಟಿಗರಲ್ಲ? ನೀನು ತಕ್ಕಂತೆ ಸಜ್ಜುಗೊಳಿಸು.

ದಮನಕನು ಅಲ್ಲಿಂದ ಹೊರಟುದು. "ಸ್ವಾಮಿಯು ತನಗೆ ಅನುಗ್ರಹ ಮುಖನಾದನು. ತನ್ನ ಮಾತಿಗೆ ಕಟ್ಟುಬಿದ್ದನು. ನನ್ನಿಂದ ಮೇಲಾದವನು ಇನ್ನು ಯಾರೂ ಇಲ್ಲ. ಚಳಿಗೆ ಬೆಂಕಿಯೂ, ಪ್ರಿಯದರ್ಶನವೂ, ರಾಜನ ಸನ್ಮಾನವೂ, ಹಾಲನ್ನಗಳೂ ಅಮೃತಗಳು" ಎಂದು ಬಗೆದುದು. ನರಿಯು ಎತ್ತಿನ ಬಳಿಗೆ ಸಾರಿ ಹೇಳಿತು—

"ರಾಜನ ಪ್ರಸಾದವನ್ನು ಹೊಂದಿದ ನೀನು ನನ್ನೊಂದಿಗೆ 'ನಿಯಮ' ದಿಂದ ಇರಬೇಕು, ಹೆಮ್ಮೆಯಿಂದ ತಾನು ಮೇಲೆಂದು ನಡೆಯಲಾಗದು. ನಾನು ನಿನಗೆ ಎಲ್ಲಾ ರಾಜ್ಯ ಸಿಗುವಂತೆ ಮಾಡುವೆ.

ಮೂರನೆಯ ಕತೆ

"ಯೋ ನ ಪೂಜಯತೇ ಗರ್ವಾದುತ್ತಮಾಧಮಮಧ್ಯಮಾನ್ ।
ನೃಪಾಸನ್ನಾನ್ ಸ ಮಾನ್ಯೋಽಪಿ ಭ್ರಶ್ಯತೇ ದಂತಿಲೋ ಯಥಾ ॥"
(ತಾತ್ಪರ್ಯ: ರಾಜಾಶ್ರಿತರನು ಗರ್ವದೆ । ಪೂಜಿಸದಿರುವನದಾವನು ।
ಸಾಜದಿ ಮಾನ್ಯನೆ ಆದರು । ಓಜೆಗೆಡುವ ದಂತಿಲನು॥")

ಈ ಭೂಮಿಯಲ್ಲಿ ವರ್ಧಮಾನವೆಂಬ ನಗರವಿದೆ. ಅಲ್ಲಿ ಜನರ ನಾಯಕನಾದ ದಂತಿಲನು ಚೆನ್ನಾಗಿ ನಡೆಸುತ್ತಿದ್ದ ಕೆಲಸಗಳಿಂದಾಗಿ ಅವನಿಗೆ ಜನರು ಹಾಗೂ ರಾಜನು ತುಷ್ಟಿಗೊಂಡಿದ್ದರು. ರಾಜನ ಹಿತವನ್ನು ಮಾಡುವವನು ಜನರಿಗೆ ಸಮ್ಮಾನ್ಯನಾಗುವುದಿಲ್ಲ, ಜನರಿಗೆ ಹಿತವನ್ನು ಮಾಡುವವನು ರಾಜರಿಂದ ದೂರಗೊಳಿಸಲ್ಪಡುವನು, ಇವೆರಡು ಮಹತ್ತಾದ ವಿರೋಧಿಗಳಿರುವಲ್ಲಿ ರಾಜನು ಮತ್ತು ಜನರ ಹಿತನಾದ ಕಾರ್ಯಕರ್ತನು ದುರ್ಲಭನೆನ್ನುವರು.

ಒಮ್ಮೆ ದಂತಿಲನು ಮದುವೆಯಾದ ನಿಮಿತ್ತ ಬಹಳ ಸಂಭ್ರಮದ ಸಮ್ಮಾನಗಳು ಆಗುತ್ತಿದ್ದುವು. ಆಗ ರಾಜನ ಮನೆಗುಡಿಸುವ ಗೋರಂಭನೆಂಬ ಸೇವಕನು ಅಲ್ಲಿಗೆ ಹೋಗಿದ್ದು, ಅವನಿಗೆ ಯೋಗ್ಯವಲ್ಲದ ಹೆಚ್ಚಿನ ಸ್ಥಾನದಲ್ಲಿ ಕುಳಿತನೆಂದು ಅರ್ಧಚಂದ್ರಹಸ್ತದಿಂದ ಕುತ್ತಿಗೆ ಹಿಡಿದು ಹೊರದೂಡಲ್ಪಟ್ಟನು. ಗೋರಂಭನು ಆ ಚಿಂತೆಯಿಂದ ಪ್ರತೀಕಾರಕ್ಕೆ ಬಯಸುತ್ತಿದ್ದನು, ರಾಜನ ಅನುಗ್ರಹ ದಂತಿಲನಲ್ಲಿ ಇಲ್ಲದಂತೆ ಮಾಡುವೆನೆಂದು ಯೋಚಿಸುತ್ತಿದ್ದನು.

ಒಂದು ಮುಂಜಾವದಲ್ಲಿ ರಾಜನಮನೆಯಲ್ಲಿ ಗೋರಂಭನು ಕಸ ತೆಗೆಯುತ್ತಾ 'ರಾಜನ ಪಟ್ಟದರಾಣಿಯನ್ನು ದಂತಿಲನು ಅಪ್ಪಿದನೆಂದು' ಗೊಣಗುಟ್ಟಿದನು. ಅದನ್ನು ಕೇಳಿದ ರಾಜನು ಅವನನ್ನು ಕುರಿತು ವಿಚಾರಿಸಿದನು. 'ರಾತ್ರಿಯಲ್ಲಿ ಇಡಿಯ ನಿದ್ದೆಯಿಲ್ಲದ ನಾನು ಕನಸಿನಲ್ಲಿ ಏನೆಂದು ಹೇಳಿದೆನೋ ಅರಿಯೆನು' ಎಂದು ಗೋರಂಭನು ಉತ್ತರವಿತ್ತನು. ಆದರೆ ರಾಜನು ಇದರಿಂದ ತನ್ನೊಳಗೆ ಕುದಿಗೊಳ್ಳುತ್ತಿದ್ದನು.

"ಹಗಲು ಕಂಡ ಅಥವಾ ಕೇಳಿದ ಸಂಗತಿಯೇ ರಾತ್ರಿಯ ಕನಸಿನಲ್ಲಿ ಒಡನುಡಿಯುವುದು ಅಥವಾ ಮಾಡುವುದು ಎನ್ನುವರು. ಅದುಮಾತ್ರ

ವಲ್ಲ, ಹೆಂಗಳ ರೀತಿ ಹೇಳಬಾರದುದು." ಇತ್ಯಾದಿ ಯೋಚಿಸಿ, ಅಂದಿನಿಂದ ದಂತಿಲನಲ್ಲಿ ರಾಜನು ಅನುಗ್ರಹದಿಂದ ಹಿಮ್ಮೊಗನಾದನು. ರಾಜನ ಆತನ ಮಂದಿರಕ್ಕೆ ಒಳಬರುವ ಅಥವಾ ಹೋಗುವ ಕ್ರಮ ನಿಂತಿತ್ತು. ಅದರಿಂದ ದಂತಿಲನು ಚಿಂತಾಗ್ರಸ್ತನಾದನು, ತಾನು ಅದೇನು ತಪ್ಪುಮಾಡಿದೆನೆಂದು ತಿಳಿಯದಾದನು.

ಗೋರಂಭನು ಬಾಗಿಲುಕಾಯುವವರೊಡನೆ ಹೇಳಿದನು— ನನಗೆ ಅವಮಾನಮಾಡಿದ ದಂತಿಲನು ತಕ್ಕ ಫಲವನ್ನು ಉಂಡನು. ನೀವೂ ಹಾಗೇ ಅರ್ಧಚಂದ್ರವನ್ನು ಹೊಂದುವಿರೆಂದು.

ಇದನ್ನು ಕೇಳಿ, ಈ ವಿಷಯದಲ್ಲಿ ಗೋರಂಭನ ಕೈವಾಡ ಇದೆಯೆಂದು ತಿಳಿದ ದಂತಿಲನು ಆತನನ್ನು ಅದೇ ರಾತ್ರಿಯಲ್ಲಿ ಕರೆಸಿದನು. ಅವನಿಗೆ ಜೋಡು ಬಟ್ಟೆಯನ್ನು ಇತ್ತು, ಮನ್ನಿಸಬೇಕೆಂದು ಹೇಳಿದನು. ಗೋರಂಭನು ಆ ಚಿಕ್ಕ ಉಡುಗೊರೆಯಿಂದ ಉಬ್ಬಿ, ತನ್ನ ಕೈವಾಡವನ್ನು ಇನ್ನು ತಿಳಿಯೆಂದನು. ತ್ರಾಸಿನ ದಂಡು ಹಾಗೂ ದುಷ್ಟನು ತುಸ ಹೆಚ್ಚುಕಡಿಮೆ ಆದರೆ ಅದರಿಂದ ಉಬ್ಬು ತಗ್ಗುಗಳನ್ನು ತೋರಿಸುವನಷ್ಟೆ!

ಆ ಮೇಲೊಮ್ಮೆ ಗೋರಂಭನು ಮುಂಜಾವದಲ್ಲಿ ಕಸವನ್ನು ಗುಡಿಸುತ್ತಾ ಹೇಳಿದನು— ನಮ್ಮ ರಾಜನು ಮಲವಿಸರ್ಜನೆಯ ಕಾಲದಲ್ಲೂ ಬಾಯಲ್ಲಿ ತಿನ್ನುತ್ತಿರುತ್ತಾನೆಂದು.

ರಾಜನು ಇದನ್ನು ಕೇಳಿ ಕಿಡಿಕಿಡಿಯಾದನು. "ಮನೆಯ ಕೆಲಸದವನಾದುದರಿಂದ ನಿನ್ನನ್ನು ನಾನು ಕೊಲ್ಲುವುದಿಲ್ಲವಾದರೂ, ಇದೇನು ಬೇಡವಾದುದನ್ನು ಗುಣುಗುಟ್ಟುವೆಯೆಂದು" ಗದರಿಸಿದನು.

ಆಗ ಗೋರಂಭನು "ರಾತ್ರಿ ನಿದ್ರೆಗೆಟ್ಟ ನಾನು ಕನಸಿನಲ್ಲಿ ಏನಾಡಿದೆನೋ ಅರಿಯೆನು. ದೇವರ ಅನುಗ್ರಹವು ನನ್ನಲ್ಲಿ ಇರಲಿ"ಯೆಂದು ಬೇಡಿದನು. ಇದನ್ನು ಕೇಳಿದ ರಾಜನಿಗೆ ಈ ಮೊದಲಿನ ದಂತಿಲನ ವಿಷಯದ ಮಾತೂ ನೆನಪಿಗೆ ಬಂತು. "ಅಂತಹ ಜನರು ಕೆಟ್ಟ ಕೆಲಸವನ್ನು ಮಾಡಲಿಕ್ಕಿಲ್ಲ. ದಂತಿಲನಿಲ್ಲದೆ ರಾಜಕಾರ್ಯಗಳೆಲ್ಲ ಸಡಿಲಾಗಿವೆ"ಯೆಂದು ಮೊದಲಾಗಿ ನಿರ್ಧರಿಸಿದನು.

ರಾಜನ ಅನುಗ್ರಹದಿಂದ ದಂತಿಲನು ಮೊದಲಿನಂತೆ ಅಧಿಕಾರಕ್ಕೆ ಏರಿದನು. "ರಾಜಾಶ್ರಿತರನು ಗರ್ವದೆ ಪೂಜಿಸದಿರುವನದಾವನು."

ಹೀಗೆ ದಮನಕನು ಹೇಳಿದ 'ನಿಯಮ'ಕ್ಕೆ ಸಂಜೀವಕನು ಒಪ್ಪಿದನು. ಅಂತೆ, ಪಿಂಗಳಕನ ಬಳಿಗೆ ಹೋಗಿ, ತನ್ನ ವೃತ್ತಾಂತವನ್ನು ಹೇಳಿದನು. ಸಿಂಹವು 'ಅಭಯವಾಗಿರೆಂದು' ಎತ್ತಿಗೆ ಹೇಳಿತು.

ಆ ಮೇಲೆ ಕರಟಕ ದಮನಕರಲ್ಲಿ ವನರಾಜ್ಯದ ಭಾರವನ್ನು ಇರಿಸಿ ಪಿಂಗಳಕನು ಸಂಜೀವಕನೊಂದಿಗೆ ಮಾತುಕತೆಯಾಡುತ್ತಾ ಇದ್ದಿತು. ಸಂಜೀವಕವು ಅನೇಕ ಶಾಸ್ತ್ರಗಳನ್ನು ನೋಡಿ ತಿಳಿದು ಹರಿತವಾದ ಬುದ್ಧಿಯುಳ್ಳುದರಿಂದ, ಸಿಂಹವು ಅರಣ್ಯಧರ್ಮವನ್ನು ಬಿಟ್ಟು ಗ್ರಾಮ್ಯ ಧರ್ಮದಲ್ಲಿರುವಂತೆ ಕೆಲವೇ ದಿನಗಳಲ್ಲಿ ಮಾರ್ಪಡಿಸಿತು. ಇವೆರಡು ಮೃಗಗಳ ನಡುವೆ ಉಳಿದ ಮೃಗಜಾತಿಗಳೆಲ್ಲವೂ ಒಳಹೋಗಲಾರದಿದ್ದುವು. ಕರಟಕ ದಮನಕಗಳಿಗೂ ಅಲ್ಲಿ ಪ್ರವೇಶವೇ ಇಲ್ಲದಂತಾಯಿತು.

ಆ ಪಿಂಗಳಕವೆಂಬ ಸಿಂಹವು ಸಂಜೀವಕವೆಂಬ ಬಸವನೊಂದಿಗೆ ಗೆಳೆತನವನ್ನು ಹೂಡಿದುದರಿಂದ ಸಿಂಹದ ಪರಾಕ್ರಮವೆಲ್ಲಾ ಉಡುಗಿದಂತಾಗಿತ್ತು. ಅದರಿಂದ, ಮಿಕ್ಕೆಲ್ಲಾ ಮೃಗಕುಲವು ಆಹಾರಕ್ಕಾಗಿ ಬೇರೆಡೆಗೆ ಓಡಿದುವು.

ಫಲಹೀನನಾದ ಅರಸನು ಒಳ್ಳೆಯ ಕುಲದವನಾದರೂ ಉನ್ನತನಾದರೂ ಆತನನ್ನು ಬಿಟ್ಟು ಆಳುಗಳು ಬೇರೆಡೆಗೆ ಸೇರುವರು, ಹಕ್ಕಿಗಳು ಒಣಗಿದ ಮರವನ್ನು ಬಿಡುವಂತೆ, ಇದೇ ಆಳು ದೊರೆಗಳಲ್ಲಿ ಮಾತ್ರವಲ್ಲ, ಸಾಂಸಾರಿಕವಾದ ಈ ಜಗತ್ತಿನ ಎಲ್ಲೆಡೆ ಜನರು ಆಹಾರಕ್ಕಾಗಿ ಸಾಮ ಮೊದಲಾದ ಉಪಾಯಗಳಿಂದ ಕೂಡಿರುತ್ತಾರೆ. ಸಾಮ ಮುಂತಾದ ಪಾಶಗಳಿಂದ ಕೂಡಿದ ಜನವು ಹಗಲಿರುಳು ಹೊಂಚುಹಾಕುತ್ತಾ, ತನ್ನ ಆಹಾರವನ್ನು ಗಳಿಸುತ್ತದೆ; ದೊಡ್ಡ ಮೀನು ಚಿಕ್ಕ ಮೀನುಗಳನ್ನು ಹಿಡಿಯುವಂತೆ.

ಗಣಪತಿಯ ಇಲಿಯನ್ನು ಶಿವನ ಸರ್ಪವೂ, ಆ ಸರ್ಪವನ್ನು ಗುಹನ ನವಿಲೂ, ಆ ನವಿಲನ್ನು ಪಾರ್ವತಿಯ ಸಿಂಹವೂ ಹೊಂಚುಹಾಕಿ ತಿನ್ನಲು ಬಯಸುವುದು. ಹೀಗೆ ಮಹಾದೇವನ ಮನೆಯಲ್ಲೇ ನಡೆವಾಗ, ಅದರ ಪ್ರಭಾವದಿಂದ ನಡೆವ ಲೋಕದಲ್ಲಿ ಅಂತಹ ತೆರವಾಗದೆ ಇದ್ದೀತೇ? ಅವೆರಡರ ಗೆಳೆತನದಿಂದ ಉಳಿದ ಮೃಗಗಳಿಗೆ ಆಶ್ರಯವೂ ಆಹಾರವೂ ಕಷ್ಟವಾಯಿತು!

Edited, Printed & Published by K. V. Shenoy
at The Prabhat Printers, Ltd., Mangalore.